**ಓ.ಎಸ್.ನಂ : 200/2019**
ಪಿ ಡಬ್ಲ್ಯು-1

ದಿ.26.03.2021 ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ವಾದಿಯಪರ ಶ್ರೀ ವಿ.ಎಂ.ಟಿ. ವಕೀಲರಿಂದ</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದ, ವಿಚಾರಗಳನ್ನು ಸತ್ಯಾಪನೆಯ ರೂಪದಲ್ಲಿ ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ನಾನು ಇಂದು ನ್ಯಾಯಾಲಯಕ್ಕೆ ದಿನಾಂಕ.03.09.2019 ರಂದು ಪ್ರತಿವಾದಿಗಳಿಗೆ ನೀಡಿಲಾದ ನೋಟೀಸ್ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-1 ಎಂದು, ಸದರಿ ನೋಟೀಸ್ ನ್ನು ಅಂಚೆ ಮೂಲಕ ಪ್ರತಿವಾದಿಗಳಿಗೆ ಕಳುಹಿದ ಬಗ್ಗೆ 5 ಅಂಚೆ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.-1(ಎ) ಯಿಂದ (ಇ) ಎಂದು, ಸದರಿ ನೋಟೀಸ್ ಪ್ರತಿವಾದಿಗಳಿಗೆ ಜಾರಿಯಾದ ಬಗ್ಗೆ 5 ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.-2 ರಿಂದ 6 ಎಂದು, ದಿನಾಂಕ.03.08.2019 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನನ್ನಿವಾಳರವರಿಗೆ ಅಂಚೆ ಮೂಲಕ ಅರ್ಜಿ ಕಳುಹಿಸಿದ ಬಗ್ಗೆ ರಸೀದಿಯನ್ನು ಹಾಜರುರಪಡಿಸಿದ್ದು ಅದನ್ನು ನಿ.ಪಿ.-7 ಎಂದು, ಉಪನೋಂದಾಣಾಧಿಕಾರಿ ಚಳ್ಳಕೆರೆ ರವರಿಗೆ ಅಂಚೆ ಮೂಲಕ ಅರ್ಜಿ ಕಳುಹಿಸಿದ ಬಗ್ಗೆ ರಸೀದಿಯನ್ನು ಹಾಜರುರಪಡಿಸಿದ್ದು ಅದನ್ನು ನಿ.ಪಿ.-8 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಆಲಿಸಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಚಳ್ಳಕೆರೆ.